ಅ) ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದಲ್ಲಿ ದಿನಗೂಲಿ ನೌಕರರಾಗಿ ಕೆಲಸ ನಿರ್ವಹಿಸುತ್ತಿರುವವರ ಸಂಖ್ಯೆ ಎಷ್ಟು; ಇವರು ಎಷ್ಟು ವರ್ಷಗಳಿಂದ ದಿನಗೂಲಿ ನೌಕರರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು)

ಅ) ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದ ವ್ಯಪ್ತಿಯಲ್ಲಿ ವಿವಿಧ ಇಲಾಖೆಗಳಲ್ಲಿ ಒಟ್ಟು 36 ಮಂದಿ ದಿನಗೂಲಿ ನೌಕರರು ಕಾರ್ಯ ನಿರ್ವಹಿಸುತ್ತಿರುತ್ತಾರೆ. ಇವರುಗಳು 1984 ರಿಂದ 1990ರ ಅವಧಿಯಲ್ಲಿ ವಿವಿಧ ದಿನಾಂಕಗಳಂದು ನೇಮಕಾತಿ ಹೊಂದಿದ್ದು ಕಾರ್ಯ ನಿರ್ವಹಿಸುತ್ತಿದ್ದಾರೆ.

ಬೆಂಗಳೂರು ಮಹಾನಗರ ಪಾಲಿಕೆಗೆ ಬರಬೇಕಾಗಿರುವ ಆಸ್ತಿ ತೆರಿಗೆ

3907 (4479) : ಶ್ರೀ ಆರ್. ಅಶೋಕ್ (ಉತ್ತರಹಳ್ಳಿ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2000–2001 ರಿಂದ 2003ನೇ ಸಾಲಿನವರೆಗೆ ಬೆಂಗಳೂರು ಮಹಾನಗರ ಪಾಲಿಕೆಗೆ ಬರಬೇಕಾದ ಆಸ್ತಿ ತೆರಿಗೆ ಬಾಕಿ ಹಣ ಎಷ್ಟು?

ಆ) ಒಂದು ಲಕ್ಷಕ್ಕೂ ಹೆಚ್ಚು ತೆರಿಗೆ ಬಾಕಿ ಉಳಿಸಿಕೊಂಡಿರುವವರು ಯಾರು; ವರ್ಷವಾರು ವಿವರ ನೀಡುವುದು;

ಇ) ಹಣ ವಸೂಲಿಗಾಗಿ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು)

ಅ) 2000–01 ನೇ ಸಾಲಿನ ರೂ. 6660.23 ಲಕ್ಷಗಳು
ಬಾಕಿ ಆಸ್ತಿ ತೆರಿಗೆ
2001–02 ನೇ ಸಾಲಿನ–ರೂ. 7800.00 ಲಕ್ಷಗಳು
ಬಾಕಿ ಆಸ್ತಿ ತೆರಿಗೆ
2002–03 ನೇ ಸಾಲಿನ – ರೂ. 7300.05 ಲಕ್ಷಗಳು
ಬಾಕಿ ಆಸ್ತಿ ತೆರಿಗೆ

ಆ) ವಿವರವಾದ ಪಟ್ಟಿಯನ್ನು ಮಾನ್ಯ ಸದಸ್ಯರಿಗೆ ಪ್ರತ್ಯೇಕವಾಗಿ ಒದಗಿಸಲಾಗುವುದು.

ಇ) ಕರ್ನಾಟಕ ಮುನಿಸಿಪಲ್ ಕಾಯ್ದೆ 1976 ಷೆಡ್ಯೂಲ್ III ಪಾರ್ಟ್–3 ರಂತೆ ಬಾಕಿ ಇರುವ ಆಸ್ತಿ ತೆರಿಗೆ ವಸೂಲಿ ಮಾಡಲು ತಗಾದೆ ನೋಟೀಸ್‌ನ್ನು ನೀಡಿ ತೆರಿಗೆ ವಸೂಲಿ ಮಾಡಲಾಗುತ್ತಿದೆ. ಅಲ್ಲದೆ ತೆರಿಗೆ ವಸೂಲಾತಿ ಶಿಬಿರಗಳನ್ನು ಸಹ ಏರ್ಪಡಿಸಲಾಗುತ್ತಿದೆ. ಅಂತಿಮವಾಗಿ ಅವಶ್ಯಕತೆ ಕಂಡುಬಂದ ಸಂದರ್ಭದಲ್ಲಿ ಚರ ಸ್ವತ್ತುಗಳನ್ನು ವಶಪಡಿಸಿಕೊಳ್ಳುವುದರ ಮೂಲಕ ಆಸ್ತಿ ತೆರಿಗೆ ವಸೂಲಾತಿಗೆ ಕ್ರಮ ಕೈಗೊಳ್ಳಲಾಗುತ್ತಿದೆ.

ಬೆಂಗಳೂರು ನಗರದ ಕ್ಲಬ್‌ಗಳು

3909 (4481) : ಶ್ರೀ ಆರ್. ಅಶೋಕ್, (ಉತ್ತರಹಳ್ಳಿ) ಮಾನ್ಯ ಮುಖ್ಯಮಂತ್ರಿಯವರ ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಯಾವ ಯಾವ ಕ್ಲಬ್‌ಗಳಿಗೆ ಗುತ್ತಿಗೆ ಆಧಾರದ ಮೇಲೆ ಜಾಗ ನೀಡಲಾಗಿದೆ; ವಿವರ ನೀಡುವುದು;

ಆ) ಇವುಗಳ ಗುತ್ತಿಗೆ ಅವಧಿ ಯಾವಾಗ ಪೂರ್ಣಗೊಳ್ಳುತ್ತದೆ; ಕ್ಲಬ್‌ಗಳವಾರು ವಿವರ ನೀಡುವುದು;

ಇ) ಇವರಿಗೆ ನಿಗಧಿಪಡಿಸಿರುವ ಗುತ್ತಿಗೆ ಹಣ ಎಷ್ಟು; ವಿವರ ನೀಡುವುದು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು)

ಅ) ಬೆಂಗಳೂರು ನಗರದಲ್ಲಿ ಈ ಕೆಳಕಂಡ ಕ್ಲಬ್‌ಗಳಿಗೆ ಸ್ಥಳಗಳನ್ನು ಗುತ್ತಿಗೆಗೆ ನೀಡಲಾಗಿದೆ.

1. ವಿಲ್ಸನ್ ಗಾರ್ಡನ್ ಕ್ಲಬ್
2. ಕಾಸ್ಮೋಪಾಲಿಟನ್ ಕ್ಲಬ್
3. ಕರ್ನಾಟಕ ಸ್ಟೇಟ್ ಬ್ಯಾಡ್ಮಿಂಟನ್ ಅಸೋಸಿಯೇಷನ್
4. ಕರ್ನಾಟಕ ಬಿಲಿಯರ್ಡ್ಸ್ ಅಸೋಸಿಯೇಷನ್
5. ಇಂದಿರಾನಗರ ಕ್ಲಬ್

ಆ)

ಕ್ಲಬ್ ಹೆಸರು	ಗುತ್ತಿಗೆ ಅವಧಿ ಮುಗಿಯುವ ದಿನಾಂಕ
1) ವಿಲ್ಸನ್ ಗಾರ್ಡನ ಕ್ಲಬ್	5.11.1996}**
2) ಕಾಸ್ಮೋಪಾಲಿಟನ್ ಕ್ಲಬ್	26.10.1985}
3) ಕರ್ನಾಟಕ ಸ್ಟೇಟ್ ಬ್ಯಡ್ಮಿಂಟನ್	3.2.2075}
4) ಕರ್ನಾಟಕ ಬಿಲಿಯರ್ಡ್ಸ್ ಅಸೋಸಿಯೇಷನ್	3.2.2075}
5) ಇಂದಿರಾನಗರ ಕ್ಲಬ್	5–3–2011

** ಈ ಸ್ವತ್ತುಗಳ ಗುತ್ತಿಗೆ ಅವಧಿ ಮುಕ್ತಾಯವಾಗಿದ್ದು ಸ್ವಾಧೀನ ತೆಗೆದುಕೊಳ್ಳಲು ಕ್ರಮ ವಹಿಸಲಾಗುತ್ತಿದೆ.

ಇ)

ಕ್ಲಬ್ ಹೆಸರು	ಗುತ್ತಿಗೆ ಹಣದ ವಿವರ
1. ವಿಲ್ಸನ್ ಗಾರ್ಡನ್ ಕ್ಲಬ್	ವಾರ್ಷಿಕ ರೂ. 24 ರಂತೆ
2. ಕಾಸ್ಮೋಪಾಲಿಟನ್ ಕ್ಲಬ್	ವಾರ್ಷಿಕ ರೂ. 1880 ರಂತೆ
3. ಕರ್ನಾಟಕ ಸ್ಟೇಟ್ ಬ್ಯಾಂಡ್ಮಿಂಟನ್ ಅಸೋಸಿಯೇಷನ್	ವಾರ್ಷಿಕ ರೂ. 100 ರಂತೆ
4. ಕರ್ನಾಟಕ ಬಿಲಿಯರ್ಡ್ಸ್ ಅಸೋಸಿಯೇಷನ್	ವಾರ್ಷಿಕ ರೂ. 100 ರಂತೆ
5. ಇಂದಿರಾನಗರ ಕ್ಲಬ್	ವಾರ್ಷಿಕ ರೂ. 5000 ರಂತೆ

ಸೇಡಂ ನಗರಕ್ಕೆ ಕುಡಿಯುವ ನೀರು

3914 (4698) : ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ (ಸೇಡಂ) ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ನಗರಕ್ಕೆ ವಿದ್ಯುತ್ ನೇರ ಲೈನ್ ಸಂಪರ್ಕಕ್ಕಾಗಿ ಅಭಾವ ಪರಿಹಾರ ಹಣದಲ್ಲಿ 8 ಲಕ್ಷ ರೂಪಾಯಿ ತುಂಬಿ, ಈ ಲೈನ್‌ನಿಂದ ಸಿಮೆಂಟ್ ಕಾರ್ಖಾನೆಯ ಪಂಪ್‌ಹೌಸಿಗೆ ಸಂಪರ್ಕ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸೇಡಂ ನಗರಕ್ಕೆ ಕುಡಿಯುವ ನೀರಿನ ತೊಂದರೆಯುಂಟಾಗಿ ಈ ನೇರ ಸಂಪರ್ಕ ವಿದ್ಯುತ್ ಲೈನ್‌ನಿಂದ ಬೃಹತ್ ಸಿಮೆಂಟ್ ಕಾರ್ಖಾನೆಯ ಪಂಪ್‌ಹೌಸ್‌ಗೆ ಸಂಪರ್ಕ ನೀಡಿರುವುದರಿಂದ ಪುನ: ಈ ನಗರಕ್ಕೆ ಕುಡಿಯುವ ನೀರಿನ ತೊಂದರೆ ಮಾಡದಂತಾಗುವುದಿಲ್ಲವೇ;